## ಕವಿ ಮನಸು

### ಮಾರಿದವನ ಕಥೆಯೇನು?



ಅಕ್ಷಯ ತದಿಗೆಯು ಬಂದಿದೆ ನೋಡಿರಿ
ಕೊಳ್ಳುವ ನಾವು ಬಂಗಾರ
ಬೇಗನೆ ಕೆಲಸವ ಮುಗಿಸಿದ ಮಡದಿಯು
ನುಡಿದಳು ತೋರುತ ವೈಯಾರ

ಈದಿನ ಕೊಂಡರೆ ಆಗುವುದೆನುವರು
ಕ್ಷಯಿಸದೆ ನಿತ್ಯವು ಅದು ವೃದ್ಧಿ
ಏತಕೆ ನಿಮಗಿದು ಅರಿವಿಗೆ ಬಾರದು
ಎಂದಿಗೆ ಬರುವುದು ಸದ್ಬುದ್ಧಿ

ಮೌನವ ಮುರಿಯುತ ಪ್ರಶ್ನೆಯನೊಂದನು
ಆಕೆಯ ಬಳಿಯಲಿ ಕೇಳಿದೆನು
ಪ್ರಶ್ನೆಗೆ ಅರ್ಥವ ಮೊದಲಿಗೆ ಯೋಚಿಸು
ಬಳಿಕವೆ ಉತ್ತರ ನುಡಿ ನೀನು

ಕೊಂಡರೆ ವೃದ್ಧಿಯು ಆಗುವುದಾದರೆ
ಮಾರಿದ ವ್ಯಕ್ತಿಯ ಕಥೆಯೇನು
ವೃದ್ಧಿಸಿಕೊಳ್ಳುವ ಕರಗದ ಸಿರಿಯನು
ಮೂಢನಂಬಿಕೆ ತೊರೆ ನೀನು॥

**ಪೆರ್ಮುಖ ಸುಬ್ರಹ್ಮಣ್ಯ ಭಟ್**

### ನಿರಾಸೆ

ಭರವಸೆಯೇ ಬಾಳಿನ ಹೊನ್ನ ಕಿರಣ
ನಿರಾಸೆಗೆ ಅತಿಯಾದ ನಿರೀಕ್ಷೆಗೆ ಕಾರಣ
ಸೋಲೇ ಗೆಲುವಿನ ಸೋಪಾನ
ಅರಿತರೆ ಸುಂದರವಾಗುವುದು ಜೀವನ

ಆಸೆಗಳಿಗೆ ಇರಬೇಕು ಪರಿಧಿ
ಇಲ್ಲವಾದರೆ ಹಾಳಾಗುವುದು ನೆಮ್ಮದಿ
ಮನುಜಗೆ ಹೆಚ್ಚಾದರೆ ದುರಾಸೆ
ಅನುಭವಿಸ ಬೇಕಾಗುತ್ತದೆ ನಿರಾಸೆ

ಸಾಧನೆ ಮಾಡಿದ ನಂತರ
ಕಾಯುವುದು ನಿರಾಸೆ ಅಂತರ
ಜೀವನದಿ ಸಂತಸ ತುಂಬಿದ್ದರೆ ನಿರಂತರ
ಬದುಕನಿಸುವುದು ಸುಂದರ ಸುಮಧುರ

**–ಚೇತನ ಭಾರ್ಗವ, ಬೆಂಗಳೂರು**

### ನ್ಯಾನೋ ಕಥೆ : ನಮ್ಮ ದೇಶ, ನಮ್ಮ ಹೆಮ್ಮೆ.

ಬೇಸಿಗೆ ರಜೆಗೆ ಎಲ್ಲಿ ಪ್ರವಾಸಕ್ಕೆ ಹೋಗುವುದು? ಎಂದು ಮನೆಯಲ್ಲಿ ಚರ್ಚೆ ಮಾಡುತ್ತಿದ್ದರು. ಅಮ್ಮ 'ದೇವಸ್ಥಾನಕ್ಕೆ ಹೋಗೋಣ' ಎಂದಳು, ಅದಕ್ಕೆ ಅಪ್ಪ 'ಇಲ್ಲಿ ಏನು ಹೊಸತಿದೆ ನೋಡಲು, ವಿದೇಶಕ್ಕೆ ಹೋಗೋಣ' ಎಂದು ನಿರ್ಧಾರವಾಯಿತು. ವಿದೇಶದ ವಸ್ತುಸಂಗ್ರಹಾಲಯಗಳಲ್ಲಿ ಕಂಡದ್ದು, ನಮ್ಮ ದೇಶದ ಬೆಲೆ ಬಾಳುವ ಶಿಲ್ಪಕಲೆಗಳು ಮತ್ತು ವಿಶಿಷ್ಟವಾದ ಆಭರಣಗಳೇ.

ಇದನ್ನು ಕಂಡ ಮಕ್ಕಳು, "ಅಪ್ಪ ಇಲ್ಲಿ ವಿಭಿನ್ನವಾದದ್ದು ಯಾವುದು ಇಲ್ಲಪ್ಪ. ನಮ್ಮ ನೆಲದ ಕಲಾಕೃತಿಗಳು ವಿಶೇಷವಾಗಿವೆ. ಅದಕ್ಕೆ ಅಲ್ಲವೇ! ಹೇಳುವುದು ನಮ್ಮ ದೇಶ, ನಮ್ಮ ಹೆಮ್ಮೆ".

**– ಮಂಜುಶ್ರೀ ಮುರಳೀಧರ್.**

### ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮಳೆಬರುವ ಕಾಲಕ್ಕ..

**ಮುಂದುವರೆದ ಭಾಗ,**

'ಕುರಿತೋದದೆಯುಂ ಕಾವ್ಯಪ್ರಯೋಗ ಮತಿ'ಗಳಾದ ಜನ ಈ ವಿಷಯದಲ್ಲಿ ಮಹಾಕವಿಗಳಿಗೇನೂ ಕಮ್ಮಿಯೇನಿಲ್ಲ. ಅವರ ಪಾಲಿಗೆ ಮಳೆ ಸೌಂದರ್ಯದ ವಸ್ತುವಲ್ಲ. ಜೀವನ್ಮರಣದ ಪ್ರಶ್ನೆ. ಹುಚ್ಚುಮಳೆ, ದೆವ್ಮಳೆ, ಅಡ್ಡಮಳೆ, ಹಾಕ್ಯಂಡು ಕುಟ್ತಾಯಿದೆ ಎಂದರೆ ಕಂಗೆಟ್ಟ ವಿಸ್ಮಯಭಾವ; ತೂಪುರು ಕಣೊ, ಮಕ್ಕಳುಚ್ಚೆ ಹೊಯ್ದಂಗೆ, ಕಂಬಳಿ ನೆನೀಲಿಲ್ಲ ಎನ್ನುವಾಗ ಅತೃಪ್ತಿ; ಜಿಬಿರು, ತಟತಟ, ಜಿಟಿಜಿಟಿ, ಬೆಳಿಗ್ಗೇನೇ ಹಿಡ್ಕೊಂಡಿದೆ, ಕಚ್ಕೊಂಡಿದೆ, ಬಾಣಕ್ಕೆ ತೂತ ಬಿದ್ದದೆ ಎಂಬಲ್ಲಿ ಬೇಸರ; 'ಕುಟುಕೋ ಮಳೆ ಬ್ಯಾಡ. ಲೊಟಕೊ ಗಂಡ ಬ್ಯಾಡ' ಎಂದವಳು ಎಷ್ಟು ರೋಸಿಹೋಗಿರಬೇಕು? ಹಿಡಿದ ಮಳೆ ಬಿಡದಿದ್ದರೆ, 'ಮುಂಜಾನೆ ಬಂದ ಮಳೆ ಸಂಜೆ ಬಂದ ಅಳಿಯ ಹೋಗೋದಿಲ್ಲ' ಎನ್ನುವುದುಂಟು. ಇಲ್ಲಿರುವುದು ಬೇಸರವಲ್ಲ. ಗೊಣಗಾಡುತ್ತಲೇ ವಾಸ್ತವವನ್ನು ಸಂತೋಷದಲ್ಲಿ ಒಪ್ಪುವ ಭಾವ. ರಾಯರು ಮಾವನ ಮನೆಗೆ ಬಂದಿರುವುದೇ ಮಡದಿಗಾಗಿ. ಸಂಜೆಗೆ ಹೋಗೆಂದರೆ ಹೇಗೆ? ಪ್ರತಿಮಳೆಗೂ ಅದರದ್ದೇ ಚಹರೆಯುಂಟು: ಅಸಲೆ ಮಳೆಗೆ ಹೆಂಚೆಲ್ಲ ಹುಲ್ಲಂತೆ. ಈ ಮಾತಿನ ಅರ್ಥ ತಿಳಿಯಬೇಕಾದರೆ ಆಗಸ್ಟ್ ತಿಂಗಳಲ್ಲಿ ಮಲೆನಾಡಿಗೊ ಕರಾವಳಿಗೊ ಭೇಟಿ ಕೊಡಬೇಕು. ಮನೆಭಾವಣಿ ಅಕ್ಷರಶಃ ಗದ್ದೆಯಾಗಿ ಶೋಭಿಸುತ್ತಿರುತ್ತದೆ.

ರೈತಾಪಿಗಳು ಮಳೆಯನ್ನು ಬಂಧುವಿನಂತೆ ಬರಮಾಡಿಕೊಳ್ಳುತ್ತಾರೆ; ಪ್ರೀತಿಯಿಂದ ಬಾವಣಿಕೆ ಮಾಡುತ್ತಾರೆ; ತಮಾಶೆಯಿಂದ ರೇಗಿಸುತ್ತಾರೆ. ಅದೊಂದು ನಿಸರ್ಗದ ಜತೆಗಿನ ಬಹುರೂಪೀ ಸಂವಾದ. 'ರೋಣಿ ಮಳೆಗೆ ಓಣಿ ತುಂಬಾ ಜ್ವಾಳ' ಎಂಬ ಕುಂದಿಲ್ಲದ ಭರವಸೆ ಅವರಿಗೆ. ಮಳೆ ಕೈಕೊಟ್ಟಾಗ ಹುಟ್ಟುವ ವಿಷಾದ ಮಾತ್ರ ಘೋರ. 'ಉತ್ತರಿ, ನಾ ಬರದಿದ್ದರೆ ನೀವು ಸತ್ತರಿ'. ರಾಜಕಾರಣಿಗಳಂತೆ ಭರವಸೆ ಕೊಡುವ; ಕೊಟ್ಟ ಮಾತಿಗೆ ತಪ್ಪಿ ಬೈಸಿಕೊಳ್ಳುವ ವಿಧಿ ನಿಸರ್ಗಕ್ಕೂ ತಪ್ಪಲಿಲ್ಲ. ಈ ಅನಿಶ್ಚಿತತೆಯೇ ನಂಬಿಕೆಯ ತತ್ವವನ್ನು ಹುಟ್ಟಿಸುತ್ತದೆ. ಈ ತತ್ವಶಾಸ್ತ್ರದಲ್ಲಿ ಬಾಳದೃಷ್ಟಿಯೂ ಪ್ರಕಟವಾಗುತ್ತದೆ. 'ಮಳೆಬಂದರೆ ಕೇಡಲ್ಲ. ಮಗ ತಿಂದರೆ ಕೇಡಲ್ಲ' ಎಂಬ ಹೇಳಿಕೆಯನ್ನು ಮಗಳಾದವಳು ಹೇಗೆ ಸ್ವೀಕರಿಸಿದವಳೊ? ಆದರೆ ಮಹಿಳೆಯರು 'ಮಳೆಗಾಲದ ಬಿಸಿಲು ನಂಬಬಾರ್ದು, ಮನೆಗಂಡನ ನಗೆ ನಂಬಬಾರ್ದು' ಎಂದು ಇದಕ್ಕೆ ಮುಯ್ಯಿ ತೀರಿಸಿದರು. ಹೆಣ್ಣನ್ನು ಚಂಚಲೆಯೆನ್ನುವ ಹೇಳಿಕೆಗಳು ಜಗತ್ತಿನಾದ್ಯಂತ ಸಿಕ್ಕಿಯಾವು. ಆದರೆ ಗಂಡಸರ ತಲೆ ಮೊಟಕುವ ಧೈರ್ಯ ತೋರಿಸಿದ್ದು ಮಾತ್ರ ಕನ್ನಡತಿಯೇ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ


ಮಳೆ–ಚಳಿ ಮನುಷ್ಯರನ್ನು ಮನೆಯೊಳಗೆ ಬಂಧಿಸುತ್ತವೆ. ಹಸಿವನ್ನು ಹೆಚ್ಚಿಸುತ್ತವೆ. ಬಿಸಿಗೆ ಬೇಡಿಕೆ ಇಡುತ್ತವೆ. ಕಾರೇಡಿ ಸಾರು, ಮೀನುಹುಳಿ ಮುಂಚೂಣಿಗೆ ಬರುತ್ತವೆ. ಶೀಸೆಯ ತಳದಲ್ಲಡಗಿದ ಹನಿರಸ ಅಮೃತವಾಗುತ್ತದೆ. ಸುಪ್ತ ಕಾಮ ಕೆರಳುತ್ತದೆ. ಮಳೆಯ ಬಣ್ಣನೆಗಳಲ್ಲಿ ಜಡಿ ಚಚ್ಚು ಬಡಿ ಕಚ್ಚು ಕ್ರಿಯಾಪದಗಳಿರುವುದು ಮಾರ್ಮಿಕವಾಗಿದೆ. ಋಷ್ಯಶೃಂಗ' ನಾಟಕದ ಹುಡುಗಿ, ತನ್ನನ್ನು ಹದಗೊಂಡ ನೆಲಕ್ಕೂ ತನ್ನೊಡನೆ ಕೇಳಿಯಾಡಲಿರುವ ಋಷಿಪುತ್ರನನ್ನು ಮಳೆಗೂ ಹೋಲಿಸುತ್ತ, ಕ್ರಿಯಾಪದಗಳಲ್ಲೇ ಅವನನ್ನು ಆವಾಹಿಸುತ್ತಾಳೆ. ಆಷಾಢದಲ್ಲಿ ಭೂಮಿಯ ಮೇಲಣ ಚರಾಚರಕ್ಕೂ ಬೆದೆ. ಹೊಲಗೆಲಸ ಕೆಡಬಾರದೆಂದೊ ಏನೊ, ಈ ಮಾಸದಲ್ಲಿ ಹೊಸ ದಂಪತಿಗಳನ್ನು ಅಗಲಿಸುವ ರಿವಾಜಿದೆ. ಆದರೆ ಪ್ರಾಣಿಗಳಿಗೆ ಕಟ್ಟಳೆ ವಿಧಿಸುವವರು ಯಾರು? ನಾಯಿಗಳು ನಡುಬೀದಿ ನಾರಾಯಣರಾಗಿ ರತಿಕೇಳಿ ಆರಂಭಿಸುತ್ತವೆ; ಗುಂಡಿಗೊಟರೆಯ ನೀರು ಮಿಲನಕಾತರ ಕಪ್ಪೆಗಳ ಸಮೂಹಗಾನಕ್ಕೆ ವೇದಿಕೆಯಾಗುತ್ತದೆ. ಈ ರತಿನಿರತ ಮಂಡೂಕಗಳಿಗೆ ಹಾವು ಹೊಂಚಿ ಬರುತ್ತದೆ. ಇದೇ ಹಂಗಾಮಿನಲ್ಲಿ ಅತಿಕಾಮಿ ಜೋಕುಮಾರನು ಸವಾರಿ ಹೊರಟು, ಬೀದಿ ಹೆಂಗಳೆಯರನ್ನು ಕೆಣಕಿ ಕೈಕಾಲು ಮುರಿಸಿಕೊಂಡು ಸಾಯುವನು. ಮಳೆಯ ರಂಗಭೂಮಿಯಲ್ಲಿ ನಡೆವ ಜೀವನ್ಮರಣದ ಆಟಗಳು ದಿಗಿಲು ಹುಟ್ಟಿಸುತ್ತವೆ.

ಮಳೆಗೂ ಕಾಮಪ್ರೇಮಕ್ಕೂ ಇರುವ ನಂಟನ್ನು ಚೆನ್ನಾಗಿ ಶೋಷಿಸಿದವರು ಬಹುಶಃ ಸಿನಿಮಾದವರೇ ಅಲ್ಲಿ ಹೊರಸಂಚಾರಕ್ಕೆ ಬಂದ ನಾಯಕ–ನಾಯಕಿ ಮಳೆಗೆ ಸಿಕ್ಕಿಕೊಳ್ಳುವ ದೃಶ್ಯವೊಂದು ಕಡ್ಡಾಯವಾಗಿರುತ್ತದೆ ಮುಂದಿನ ಘಟನಾವಳಿ ನಿರೀಕ್ಷಿತ: ಇಬ್ಬರೂ ತೊಯ್ದು ತಪ್ಪಡಿಗಳಾಗಿ ಪಾಳುಬಿದ್ದ ನಿರ್ಜನ ಮನೆಯೊಂದನ್ನು ಆಶ್ರಯಿಸುತ್ತಾರೆ. ನಾಯಕ ಸೌದೆ ಒಟ್ಟುಹಾಕಿ ಅಗ್ನಿ ಪುಟಿಸುತ್ತಾನೆ. ಅವನ ಒದ್ದೆ ಅಂಗಿಯೊಳಗಿಂದ ಹುರಿಗೊಳಿಸಿದ ಮೈಕಟ್ಟು. ಕಣ್ಣಲ್ಲಿ ದುಡುಕು, ಯಾಚನೆ, ಚಿರತೆಹಸಿವು. ಅವಳ ತೊಯ್ದ ಸೀರೆಗಂಟಿಕೊಂಡ ಕಾಯದ ಏರಿಳಿತ; ಚಿಗರೆಗಣ್ಣಲ್ಲಿ ಆಸೆ, ಗೊಂದಲ, ಆತಂಕ. 'ಬಯಕೆ ತೋಟದ ಬೇಲಿಯೊಳಗೆ ಕರಣಗಣದಿ ರಿಂಗಣ'. ಹಿನ್ನೆಲೆಯಲ್ಲಿ 'ಭಿಗೇ ಆಜ್ ಇಸ್ ಮೋಸಂ ಮೇ ಲಗೀ ಕೈಸೀ ಏ ಅಗನ್' ಹಾಡು. ಭಾವನೆಗಳನ್ನು ಬಡಿದೆಬ್ಬಿಸಲು ಮನ್ಮಥನ ಕೈಗೆ ಮಳೆಬಿಲ್ಲನ್ನು ಕೊಟ್ಟಿದ್ದೇ ತಪ್ಪಾಯಿತು.

ಮಳೆ ತನ್ನ ಮೊದಲ ಪಾದವೂರುವಾಗ ನನ್ನ ಸ್ಮೃತಿಕೋಶವು ಮೆಲ್ಲನೆ ತೆರೆದುಕೊಳುತ್ತಿದೆ. ಕಾರ್ಗಾಲಕ್ಕೆ ತಿಂಗಳಿರುವಾಗಲೇ ಮೆದೆಹುಲ್ಲನ್ನು ಕೊಯ್ದು ತಂದು ಕೊಟ್ಟಿಗೆ ಭಾವಣಿಗೆ ಹೊದೆಸುವುದು; ಹೆಂಚುಗಳ ಮೇಲೆ ಕೈಯಾಡಿಸುವುದು; ಸೌದೆ ಸೀಳಿ ಕೊಟ್ಟಿಗೆಯಲ್ಲಿ ಒಟ್ಟುವುದು; ಬಣವೆಗೆ ನೀರಿಳಿಯದಂತೆ ಗರಿ ಹಾಸುವುದು; ಗಲ್ಲಿನೀರು ತಿಪ್ಪೆಗೆ ಹೋಗುವಂತೆ ಕಾಲುವೆ ತೋಡುವುದು– ಹೀಗೆ ವಾರ್ಷಿಕ ಕರ್ಮಗಳ ಸರಣಿ ಶುರುವಾಗುತ್ತಿತ್ತು. ಅಪ್ಪ ನೇಗಿಲು ಕುಂಟೆ ಹೊರಗಿಟ್ಟು ಕಟಕೊಟ ಮಾಡಿ ಸರಿಪಡಿಸುತ್ತಿದ್ದನು; ಅಮ್ಮ ಹಪ್ಪಳ ಸಂಡಿಗೆ ಕೊರಬಾಡು ಮಾಡಿ ಡಬ್ಬದಲ್ಲಿ ತುಂಬುತ್ತಿದ್ದಳು. ನಾವು ಸ್ಕೂಲಿಗೆ ಪಾಟಿಚೀಲದ ತಯಾರಿ ಮಾಡಿಕೊಳ್ಳುತ್ತಿದ್ದೆವು. ವರ್ಷಋತು ನಿರ್ದೇಶಕನಂತೆ ಬಂದು ಕೆಲಸ ಕಾರ್ಯ ಉಡುಪು ಆಹಾರ ಪಾನೀಯಗಳನ್ನು ನಾಟಕೀಯವಾಗಿ ಬದಲಿಸುತ್ತಿತ್ತು. ಆಗ ಮಿರ್ಚಿ ಹುರಿಗಾಳು ಹಪ್ಪಳ ಕೊರಬಾಡುಗಳಿಗೆ ದಿಢೀರ್ ಮಾನ್ಯತೆ; ಒಲೆಯ ಆಸುಪಾಸಿನ ಜಾಗಕ್ಕೆ ಭಯಂಕರ ಬೇಡಿಕೆ; ಕೊಡೆ ಉಣ್ಣೆಟೋಪಿ ಸ್ವೆಟರು ಕಂಬಳಿಗೊಪ್ಪೆ ಗಂಬೂಟು ಅಜ್ಞಾತವಾಸ ಮುಗಿಸಿ ಹೊರಗಿಣುಕುತ್ತವೆ. ಎಲ್ಲವೂ ಸಂಗೀತ ಗೋಷ್ಠಿ ಶುರುವಾಗುವ ಮುನ್ನ ತಂಬೂರಿ ಶೃತಿಗೊಳಿಸುವ, ಸುತ್ತಿಗೆಯಿಂದ ತಬಲದ ಚರ್ಮಪಟ್ಟಿ ಬಿಗಿಗೊಳಿಸುವ ಕೆಲಸಗಳು.

ಈ ವರ್ಷಸಂಗೀತದಲ್ಲಿ ಬೇಕಾದಷ್ಟು ಅಪಸ್ವರ ಇರುತ್ತಿದ್ದವು. ನಾವು ಪಾತ್ರೆಗಳನ್ನು ಸೋರುವ ಜಾಗಗಳಿಗಿಟ್ಟು ಟಪಾಟಣ್ ಆಲಿಸುತ್ತಿದ್ದೆವು. (ಶರೀಫರು ಭಾವಿಸಿದಂತೆ ಮನೆಯ ಮಾಳಿಗೆ ಸೋರುತ್ತಿದ್ದುದು ಅಜ್ಞಾನದಿಂದಲ್ಲ.) ಅಪ್ಪನ ಕುಲುಮೆ ಕರ್ಫ್ಯೂ ವಿಧಿಸಿದಂತೆ ಬಂದಾಗುತ್ತಿತ್ತು. ಹೊಲದ ಪೀಕು ಶೀತಹಿಡಿದು ಹಳದಿಯಾಗುತ್ತಿತ್ತು. ಗೋಡೆಗೆ ಪಾಚಿ ಹಬ್ಬುತ್ತಿತ್ತು. ಒಗೆದ ಬಟ್ಟೆ ಒಣಗದೆ ದುರ್ವಾಸನೆ. ಕಾಲ್ಬೆರಳ ಸಂದಿಯಲ್ಲಿ ಕೆಸರಗಾಯ. 'ಸ್ವಾತಿಮಳೆ ಹೇತೇನೆಂದ್ರೂ ಬಿಡಲ್ಲ' ಮಾತಿನ ಅರ್ಥ ಮನೆಯೊಳಗೆ ಕಕ್ಕಸ್ಸು ಕಟ್ಟಿಕೊಂಡಿರುವವರಿಗೆ ಆಗಲಿಕ್ಕಿಲ್ಲ. ಎಲ್ಲಕ್ಕಿಂತ ಕಷ್ಟ ಕೂಲಿಕಾರರದು. ಅವರನ್ನು ಕರೆಯುವವರಿಲ್ಲ. ಕುಂತುಣ್ಣಲು ದವಸವಿಲ್ಲ. ಹೊಲದ ಪೈರು ಕೈಗೆ ಬಂದಿಲ್ಲ. ಆಗ ನಾವು ತಿಪ್ಪೆಯ ಮೇಲೆ ಹಚ್ಚಗೆ ಬೆಳೆದ ಮುಳ್ಳರಿವೆ ಕೊಯ್ದು ತರುತ್ತಿದ್ದೆವು. ಅಮ್ಮ ಅದರ ಕಂಕುಳ ಮುಳ್ಳನ್ನು ಕಿತ್ತು ಉಪ್ಪು ಮೆಣಸು ಹಾಕಿ ಬೇಯಿಸುತ್ತಿದ್ದಳು. ಆಪದ್ಧನದಂತೆ ಅಡಗಿಸಿದ್ದ ದವಸವೆಲ್ಲ ಮುಗಿದ ಬಳಿಕ, ಅವಳ ವಾಲೆ–ಬುಗುಡಿ ಅಡಮಾನಕ್ಕೆ ಹೊರಡುತ್ತಿದ್ದವು. ಒಮ್ಮೆ ನನಗೆ ರೈಲ್ವೆ ಪಾಸನ್ನು ನವೀಕರಿಸಲು ಐದು ರೂಪಾಯಿ ಸಿಗದೆ ಕಾಲೇಜು ತಪ್ಪಿಸಿ ಮನೆಯಲ್ಲೇ ಉಳಿದಿದ್ದೆ. ಅಪ್ಪನಿಗೆ ಗೊತ್ತಾಗಿದ್ದೇ 'ಟೇಶನ್ನಿಗೆ ಬಂದಿರು' ಎಂದು ಹೊರಬಿದ್ದ. ನಾನು ಸ್ಟೇಶನ್ ತಲುಪುವಾಗ ಆತ ತೊಪ್ಪೆಯಾಗಿ ಗೇಟಿನಲ್ಲಿ ನಿಂತಿದ್ದ. ಕೈಯಲ್ಲಿ ಒದ್ದೆಮುದ್ದೆಯಾದ ಹಸಿರುನೋಟು. ನೆಲವಾಸಿಗಳ ಬವಣೆ ಸೆಣಸಾಟ ಪ್ರೀತಿಗಳನ್ನು ಬಹಿರಂಗಗೊಳಿಸಲೆಂದೇ ಬರುತ್ತದೆಯೇ ಈ ಮಳೆ?

ಕಚ್ಚಿಕೊಂಡ ಮಳೆ ನಿಂತು ತುಸು ಹೊರಪುಗೊಟ್ಟರೆ ಸಗ್ಗದ ಬಾಗಿಲು ತೆರೆಯುತ್ತಿತ್ತು. ಬೂದಿಬಡುಕ ಆಗಸ ನೋಡಿ ಸಾಕಾಗಿದ್ದ ಮನ, ಸೂರ್ಯನ ಬೆಳ್ಳಿಮುಖ ಕಂಡು ಅರಳುತ್ತಿತ್ತು. ಕೊಡಗಿನ ಮಳೆಪ್ರವಾಸದಲ್ಲಿರುವಾಗ್ಗೆ ಮಳೆಬಿದ್ದ ಮಾರನೇ ಬೆಳಿಗ್ಗೆ ನಾನು–ಬಾನು, ತಿರುಗಾಟಕ್ಕೆ ಹೊರಟಿದ್ದೆವು. ಗೊಪ್ಪೆಹಾಕಿಕೊಂಡು ಕೆಲಸಗಾರರು ಗುದ್ದಲಿ ಕೊಡಲಿ ಬುಟ್ಟಿ ಹಿಡಿದು ಲೈನಿನ ಮನೆಗಳಿಂದ ಏರುತ್ತ ಇರುವೆ ಸಾಲಾಗಿ ಎದುರಾದರು. ಕೆಲವರು ಪ್ಲಾಸ್ಟಿಕ್ ಹಾಳೆ ಸುತ್ತಿಕೊಂಡು, ಕಾಲಿಗೆ ಗಂಶೂ ಹಾಕಿಕೊಂಡು ಪ್ಯಾಕಾಗಿದ್ದರು. ಹೆಂಗಸರು ತಾಂಬೂಲ ಹಾಕಿ ಬಾಯಿ ಕೆಂಪಾಗಿ ಮಲ್ಲಿಗೆ ಮುಡಿದಿದ್ದರು. ಗಂಡಸರು ಬಹುಶಃ ಕುಡಿಕುಡಿದು ಕೆನ್ನೆಬತ್ತಿ ಮುಖಕ್ಷೌರ ಬೆಳೆದು– ಚಲಿಸುವ ಕಳೇಬರಗಳಂತೆ ಕಂಡರು. ಅವರೆಲ್ಲ ಜರಿದ ಗುಡ್ಡೆಯ ಮಣ್ಣೆತ್ತಲು, ಕಾಫಿಗಿಡದ ಮೇಲೆ ಬಿದ್ದಿದ್ದ ಮರ ಕಡಿಯಲು ಹೊರಟಿದ್ದರು. ದೊಡ್ಡಮಳೆ ಬಂದು ನಿಂತೊಡನೆ ಅಪ್ಪ ಕೂಡ ಹೊಲಕ್ಕೆ ನೀರು ನುಗ್ಗಿ ಎಲ್ಲಿ ಬದುಗಳು ಒಡೆದವೊ ಎಂದು ಗುದ್ದಲಿ ಹಿಡಿದು ಓಡುತ್ತಿದ್ದನು. ನಮ್ಮ ಬಡಾವಣೆಯಂತೂ ಯುದ್ಧಭೂಮಿ. ಗೋಡೆ ಕುಸಿದ, ಛತ್ತು ಹಾರಿಹೋದ, ಒಪ್ಪಾರ ಬಾಗಿದ, ಮರ ಬಿದ್ದ, ಮುದುಕಿ ಪ್ರಾಣಬಿಟ್ಟ



ದೃಶ್ಯಗಳನ್ನು ಜನ ತಪಾಸಣೆ ಮಾಡುತ್ತ ತಿರುಗುತ್ತಿದ್ದರು. ಪತ್ರಿಕೆಯ ತುಂಬ ಏರಿ ಒಡೆದ, ಗದ್ದೆ ಕೊಚ್ಚಿಹೋದ, ಕಡಲ್ಕೊರೆತದಲ್ಲಿ ತೆಂಗಿನಮರ ಉರುಳಿದ ಸುದ್ದಿಗಳು.

ಭೂಮಿಗಿಂತ ದೊಡ್ಡದಾಗಿರುವ ಎಷ್ಟೊ ಗ್ರಹಗಳಲ್ಲಿ ಮಳೆಯಿಲ್ಲವಂತೆ. ಎಂತಲೇ ಅಲ್ಲಿ ಈ ವರ್ಣರಂಜಿತ ಬದುಕಿಲ್ಲ. ಭೂಮಿ ಮೇಲೆ ಮಾತ್ರ ಮಳೆಯಿಂದ ಮಣ್ಣಿನಗಂಧ ಸೃಷ್ಟಿಯಾಗುತ್ತದೆ. ಸತ್ತಂತೆ ನೆಲಕ್ಕಂಟಿದ ಹುಲ್ಲು ಚಿಗುರುತ್ತದೆ. ಸುಪ್ತಧ್ಯಾನದಲ್ಲಿದ್ದ ಹೆಸರಿಲ್ಲದ ಬಿತ್ತಗಳು ಮೊಳಕೆಯೊಡೆದು ತಲೆಯೆತ್ತುತ್ತವೆ. ಬತ್ತಿದ ಕೆರೆ ಹೊಳೆವ ಕನ್ನಡಿಯಾಗುತ್ತದೆ. ಹೊಳೆಗೆ ಹೊಸನೀರು ನುಗ್ಗುತ್ತದೆ. ಪೈರು ಬೆಳೆದು ಹೂವಾಗಿ ಹುಲ್ಲಾಗಿ ದವಸವಾಗಿ ಮನೆಗೆ ಆಗಮಿಸುತ್ತದೆ. ಮುತ್ತಿನ ಮೂಗುತಿ ಮುಡಿದ ಎಲೆಗಳು ಕಂಗೊಳಿಸುತ್ತವೆ. ಬಿಸಿಲೂ ಮಳೆಯೂ ಕೂಡಿ 'ಮೋಡದ ನಾಡಿನ ಬಾಗಿಲಿಗೆ ಕಮಾನು ಕಟ್ಟುವ' ಮಳೆಬಿಲ್ಲಾಗುತ್ತವೆ. ಬೆಟ್ಟಗಳು ಮಂಜಿನ ಚಾದರ ಹೊದೆಯುವವು. ಕಣಿವೆಗಳು ಮಂಜಿನ ಉಂಡೆಗಳನ್ನು ಆಗಸಕ್ಕೆ ಎಸೆಯುವವು. ಬೆದೆಮುಗಿದು ಗಾನ ನಿಲ್ಲಿಸಿದ ಮಂಡೂಕಗಳು ಮೌನಕ್ಕೆ ಸಲ್ಲುವವು; ನೆಂದ ಗರಿ ಕೊಡವುತ್ತ ಕೊಂಬೆಗಳ ಮೇಲೆ ಕೂತು ಮೈಯಾರಿಸಿಕೊಳ್ಳುವ ಹಕ್ಕಿ: ಬಿಲದೊಳಗೆ ನುಗ್ಗಿದ ನೀರಿಗೆ ಹೊರಬಂದು ಕಡ್ಡಿಯ ಮೇಲೆ ಜೀವಹಿಡಿದು ತೇಲುವ ಇರುವೆ; ಮರಿಗಳನ್ನು ತೋಳರೆಕ್ಕೆಯೊಳಗೆ ಸೇರಿಸಿಕೊಂಡು ನಿಂತ ತಾಯಿಕೋಳಿ; ಜುಳುಜುಳಿಸುವ ತೋಡು; ಕುಡುಕರಂತೆ ಅಡ್ಡಹಾಯುವ ಹಳ್ಳಗಳ ಭೋರ್ಗರೆತ; ಕೋಡಿಯಲ್ಲಿ ಹತ್ತುಮೀನು ಕಡಿಯಲೊ ಗೋಮಾಳದಲ್ಲಿ ಅಣಬೆ ಕೀಳಲೊ ಸೈನಿಕರಂತೆ ಹೊರಟುನಿಂತ ಪಡ್ಡೆಗಳು; ಚರಾಚರದಲ್ಲೂ ಜೀವ ಸಂಚಾರ.

ಮಳೆ ಎಂದೂ ಒಂಟಿಯಲ್ಲ. ಅದೊಂದು ಚಿತ್ರಸಮೂಹ. ಗುಡುಗು–ಸಿಡಿಲು, ಗಾಳಿ–ಮಿಂಚು, ಆಲಿಕಲ್ಲು–ಉರುಳುವ ಮರ, ನೆಲದ ಹಸಿರು, ಕುಸಿದ ಬೆಟ್ಟ, ಕೊಡೆ–ಕಂಬಳಿಕೊಪ್ಪೆ, ಕಪ್ಪೆ–ಹಾವು, ಇಂಬಳ–ರಕ್ತ, ಅಮ್ಮ ಸುಟ್ಟುಕೊಡುತ್ತಿದ್ದ ಹಪ್ಪಳ– ಅಪ್ಪನ ಕೈಯ ನೆಂದನೋಟು, ಕಾಮನಬಿಲ್ಲು– ಅದೊಂದು ದೊಡ್ಡ ಸಂಸಾರ. ಸುಡುಬಿಸಿಲಿಗೆ ಬಳಲಿದ ಜನ ಅದನ್ನು ಆರ್ತವಾಗಿ ಕರೆವರು; ಅದು ಆಗಮಿಸಿದಾಗ ಬೆದೆಹತ್ತಿದ ಮಣಕದಂತೆ ಕುಣಿದಾಡುವರು. ಅಬ್ಬರಿಸುವಾಗ ಅಳಲುವರು; ಕಚ್ಚಿಕೊಂಡಾಗ ಬಿಡಾರಬಿಟ್ಟ ನಂಟರನ್ನು ಬೀಳ್ಕೊಡುವಂತೆ ತವಕಿಸುವವರು. ಈ ದ್ವಂದ್ವೋಪಚಾರ ಮಳೆಗೆ ಮಾತ್ರವೇ? ಲೋಕದ ಸಮಸ್ತ ಜೀವಿಗಳಿಗೂ ಅಲ್ಲವೇ? ಬೀಳ್ಕೊಡಿಗೆಯ ತೆರಪಿಲ್ಲದ ಬದುಕೊಂದು ಬದುಕೇ ಅಲ್ಲ. ಆದರೆ ಬೀಳ್ಕೊಂಡ ಕೆಲವರಾದರೂ ನಕ್ಷತ್ರಗಳಾಗುವರು.ಎಂತಲೇ ನಮ್ಮ ಮಳೆಗಳೆಲ್ಲ ನಕ್ಷತ್ರಗಳ ಹೆಸರಲ್ಲಿವೆ–ಭರಣಿ, ರೋಹಿಣಿ, ಹಸ್ತಾ, ಚಿತ್ರಾ. ಪ್ರೀತಿವಂಚಿತನಾದ ರಾಜಕುಮಾರ ಧ್ರುವ ನಕ್ಷತ್ರವಾದನು; ಅತ್ತೆಕಾಟ ತಡೆಯಲಾರದೆ ಉತ್ತರಾದೇವಿ ಕೂಡ ಮನೆಬಿಟ್ಟು ಉತ್ತರಿ ಮಳೆಯಾಗಿ ಮುಗಿಲೂರಲ್ಲಿ ನೆಲೆಸಿದಳು. ವಿಶೇಷತೆ ಇರುವುದು, ಮನುಷ್ಯರು ಲೋಕದ ಬಾಳಿಗೆ ಬೇಸತ್ತು ಆಗಸದ ತಾರೆಗಳಾಗುವುದರಲ್ಲಿ ಅಲ್ಲ; ಆಗಸದ ಏಕಾಂತ ಬದುಕು ಬೇಸರವಾಗಿ ನೀರಾಗಿ ಬೆಳಕಾಗಿ ಮತ್ತೆ ನೆಲಕ್ಕಿಳಿಯುವುದರಲ್ಲಿ. ಹೀಗಿರುತ್ತ ಮಳೆ ಬರುವ ಕಾಲಕ್ಕೆ ಒಳಗೆ ಕಡೆವಕಲ್ಲಂತೆ ಕೂರುವುದಾದರೂ ಎಂತು?

# ರೆಡ್ಡಿ ಕುಲದ ಮಹಾಮಾತೆ.... ಹೇಮರೆಡ್ಡಿ ಮಲ್ಲಮ್ಮ

**■ ವೀಣಾ ಹೇಮಂತ್ ಗೌಡ ಪಾಟೀಲ್**

ಆಕೆ ಹೆಣ್ಣು, ಅಬಲ್ ಎಂಬಂತೆ ಜನರಿಂದ ಬಿಂಬಿಸಲ್ಪಟ್ಟರೂ ಸಬಲೆಯಾಗಿದ್ದಳು. ಎಲ್ಲಿ ಬಾಗಬೇಕು, ಎಲ್ಲಿ ಎದ್ದು ನಿಲ್ಲಬೇಕು ಎಂಬುದು ಆಕೆಗೆ ಗೊತ್ತಿತ್ತು. ಗುರು ಹಿರಿಯರಿಗೆ, ಅತ್ತೆ ಮಾವನಿಗೆ, ಕೈಹಿಡಿದ ಪತಿಯ ಜೊತೆ ಗೌರವಾದರದಿಂದ ನಡೆದುಕೊಳ್ಳುತ್ತಿದ್ದ ಆಕೆ ಮೈದುನ ದುಶ್ಚಟಗಳಿಗೆ ಬಲಿಯಾದಾಗ ಆತನನ್ನು ಸರಿದಾರಿಗೆ ತರಲು ಕಠೋರವಾಗಿ ನಡೆದುಕೊಂಡಳು. ನಾದಿನಿಯರನ್ನು, ನೆಗೆಣ್ಣಿಯರನ್ನು ಪ್ರೀತಿ ವಿಶ್ವಾಸದಿಂದ ಒಲಿಸಿಕೊಂಡಳು. ಆ ಪರಶಿವನನ್ನು ಸದಾ ಕಾಲ ಭಕ್ತಿ ಭಾವದಿಂದ ಪೂಜಿಸಿ ಆತನ ಪರಮ ಸಾನಿಧ್ಯ ಪಡೆದಳು.



ಗುರುವಿನ ಮಠದಾಗ ತಿರುಗಿ ಹೋದವರಾರು ಗುರುವಿನ ಮಗಳು ಗುರು ತಾಯಿ ಮಲ್ಲಮ್ಮ ಹೇಮರೆಡ್ಡೇರ ಸೊಸಿ..... ಎಂದು ನಮ್ಮ ಜನಪದರು ತಾಯಿ ಮಲ್ಲಮ್ಮನನ್ನು ಹಾಡಿ ಹೊಗಳಿದ್ದಾರೆ. ಸಂತ ಕವಿ ಶಿಶುನಾಳ ಶರೀಫರು ಮಲ್ಲಮ್ಮನ ಕುರಿತು ಗೀತೆಯನ್ನು ರಚಿಸಿದ್ದಾರೆ

ಹೇಮರೆಡ್ಡಿಮಲ್ಲಮ್ಮ ಇಂದಿನ ಆಂಧ್ರಪ್ರದೇಶದಲ್ಲಿರುವ ಶ್ರೀಶೈಲ ಪ್ರಾಂತದ ದಕ್ಷಿಣದಲ್ಲಿರುವ ರಾಮಪುರದ ನಾಗಿರೆಡ್ಡಿ ಮತ್ತು ಗೌರಮ್ಮ ಎಂಬ ದಂಪತಿಗಳಿಗೆ ಶ್ರೀಶೈಲದ ಮಲ್ಲಿಕಾರ್ಜುನ ಸ್ವಾಮಿಯ ಆಶೀರ್ವಾದದಿಂದ ಹುಟ್ಟಿದ ಮಗಳು.

ತಂದೆ ತಾಯಿಯರ ಒಳ್ಳೆಯ ಗುಣನಡತೆ,ಗುರುಭಕ್ತಿ, ಕಾಯಕ ನಿಷ್ಠೆ ಪ್ರಾಮಾಣಿಕತೆಗಳು ಮಗಳಲ್ಲೂ ಒಡ ಮೂಡಿದವು. ಬೇರಿನಂತೆ ಮರವಲ್ಲವೇ. ಒಳ್ಳೆಯ ಸಂಸ್ಕಾರವಂತೆಯಾಗಿ ಬೆಳೆದ ಮಲ್ಲಮ್ಮ ಪ್ರಾಪ್ತ ವಯಸ್ಕಳಾದಾಗ ಆಕೆಯನ್ನು ಹತ್ತಿರದಲ್ಲಿಯೇ ಇದ್ದ ಕುಮಾರಗಿರಿ ಬಳಿಯ ವೆಂಕಟರೆಡ್ಡಿ ಅವರ ಮಗ ಭರಮಗೌಡನಿಗೆ ಕೊಟ್ಟು ಮದುವೆ ಮಾಡಲಾಯಿತು. ಭರಮಗೌಡ ಕೊಂಚ ಮಂದ ಬುದ್ಧಿಯವನು. ಬಹಳ ಮುಗ್ಧ ಮತ್ತು ಹೇಳಿದ್ದನ್ನು ಮಾತ್ರ ಅನುಸರಿಸುವ ಸಾಧು ಬುದ್ಧಿಯವನು. ಆದರೆ ಮಲ್ಲಮ್ಮ ಎದೆಗುಂದಲಿಲ್ಲ... ಗಂಡ ಹೇಗೇ ಇದ್ದರೂ ಪತಿಯೇ ಪರದೈವ ಎಂಬಂತೆ ಆತನ ಸೇವೆಯನ್ನು ಮಾಡುತ್ತಿದ್ದಳು.

ಹೊಸದಾಗಿ ಬಂದಾಗ ಮನೆಯಲ್ಲಿ ಅತ್ತೆ, ಮಾವ, ಭಾವ, ಓರಗಿತ್ತಿಯರು, ನಾದಿನಿಯರು ಮತ್ತು ಅವರ ಗಂಡಂದಿರು ಹೀಗೆ ತುಂಬು ಸಂಸಾರ. ಮಲ್ಲಮ್ಮನ ಸಾತ್ವಿಕ ಮತ್ತು ಎಲ್ಲದಕ್ಕೂ ಹೂಗುಡುವ ಗುಣವನ್ನು ಕಂಡ ಓರಗಿತ್ತಿಯರು ಮತ್ತು ನಾದಿನಿಯರು ತಮ್ಮೆಲ್ಲಾ ಕೆಲಸಗಳನ್ನು ಆಕೆಯ ಮೇಲೆ ಹೇರಿ ಆರಾಮವಾಗಿ ಕಾಲ ಕಳೆಯುತ್ತಿದ್ದರು. ಮಲ್ಲಮ್ಮ ಕೊಂಚವೂ ಬೇಸರಿಸದೇ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸುತ್ತಿದ್ದಳು. ಅಷ್ಟೆಲ್ಲ ಕೆಲಸ ಮಾಡಿ ಮುಗಿಸುವ ಮಲ್ಲಮ್ಮನಿಗೆ ಒಳ್ಳೆಯ ಆಹಾರವನ್ನು ಕೂಡ ಕೊಡುತ್ತಿರಲಿಲ್ಲ.

ಎಲ್ಲರೂ ಊಟ ಮಾಡಿದ ಮೇಲೆ ಉಳಿದ ಹೊತ್ತಿದ ಅಂಬಲಿ ಆಕೆಯ ಆಹಾರವಾಗಿರುತ್ತಿತ್ತು. ಇದು ಕೂಡ ಭಗವಂತನ ಕೃಪೆ ಎಂದು ಭಾವಿಸುವ ಮಲ್ಲಮ್ಮ ತನ್ನ ಪಾಲಿಗೆ ಬಂದ ಅಂಬಲಿಯನ್ನೇ ಲಿಂಗ ಪೂಜೆ ಮಾಡಿ ದೇವರಿಗೆ ನೈವೇದ್ಯ ಮಾಡಿ ಸೇವಿಸುತ್ತಿದ್ದಳು.

ಮನೆಯಲ್ಲಿ ಚೀಲಗಟ್ಟಲೆ ಜೋಳ, ಜೋಳದ ನುಚ್ಚುಗಳನ್ನು, ಕುಟ್ಟುವ, ಬೀಸುವ ಕಲ್ಲಿನಲ್ಲಿ ಬೀಸಲು ಹಚ್ಚುತ್ತಿದ್ದರು ಅತ್ತೆ. ಮಲ್ಲಮ್ಮನಿಗೆ ಆಕೆಯ ನೆಗೆಣ್ಣೀರು ತಮ್ಮ ಕೆಲಸಗಳನ್ನು ಕೂಡ ವಹಿಸಿ ಹೊರಟುಬಿಡುತ್ತಿದ್ದರು. ಕೊಂಚವೂ ಬೇಸರಿಸದೇ ಮಲ್ಲಮ್ಮ ತನ್ನ ಪಾಲಿನ ಬಂದ ಎಲ್ಲ ಕೆಲಸಗಳನ್ನು ಮಾಡಿ ಮುಗಿಸುತ್ತಿದ್ದಳು.



ಆಕೆಯನ್ನು ಪರೀಕ್ಷಿಸಲೆಂದೇ ಮನೆಯಲ್ಲಿ ಸಾಕಷ್ಟು ಆಳುಗಳಿದ್ದೂ ಕೂಡ ಆಕೆಯನ್ನು ಹಸುಗಳನ್ನು ಮೇಯಿಸಿಕೊಂಡು ಬರಲು ಅಡವಿಗೆ ಕಳುಹಿಸುತ್ತಿದ್ದರು. ಅಲ್ಲಿಯೂ ಕೂಡ ಮಲ್ಲಮ್ಮ ಹಸುಗಳನ್ನು ಹೊಡೆದುಕೊಂಡು ಅಡವಿಗೆ ಹೋಗಿ ಹಸುಗಳನ್ನು ಮೇಯಲು ಬಿಟ್ಟು, ಅಲ್ಲಿ ಅಡವಿಯಲ್ಲಿ ಸಿಕ್ಕ ಶಿವಲಿಂಗಕ್ಕೆ ಪೂಜೆ ಮಾಡಿ ಧ್ಯಾನಕ್ಕೆ ಕೂರುತ್ತಿದ್ದಳು. ಆಕೆಯ ಧ್ಯಾನ ಅದೆಷ್ಟು ಸಶಕ್ತವಾಗಿರುತ್ತಿತ್ತೆಂದರೆ ಹಸುಗಳು ಕೂಡ ಆಕೆಗೆ ಧ್ಯಾನಭಂಗ ಮಾಡದೆ ಅಲ್ಲಿಯೇ ಮೇಯುತ್ತಿದ್ದವು. ಇಲ್ಲವೇ ಮರದ ನೆರಳಿನಲ್ಲಿ ಮಲಗಿ ವಿಶ್ರಾಂತಿ ಪಡೆಯುತ್ತಿದ್ದವು.

ಒಂದೊಮ್ಮೆ ಮಲ್ಲಮ್ಮ ಮನೆಗೆ ಬಂದ ಭಿಕ್ಷುಕನಿಗೆ ನೀಡಲು ತನ್ನ ಬೊಗಸೆಯಲ್ಲಿ ಅತ್ತೆ ಹಾಕಿದ ಒಲೆಯೊಳಗೆ ಉರಿಯುತ್ತಿದ್ದ ನಿಗಿನಿಗಿ ಕೆಂಡಗಳನ್ನು ಮಲ್ಲಯ್ಯನ ಧ್ಯಾನ ಮಾಡಿ ಭಿಕ್ಷುಕನ ಜೋಳಿಗೆಗೆ ಹಾಕಿದಾಗ ಅದು ಧಾನ್ಯವಾಗಿ ಪರಿವರ್ತನೆಯಾಯಿತು. ಇದನ್ನು ಕಂಡು ಜನರು ಮಲ್ಲಮ್ಮನಿಗೆ ಬೆಂಕಿ ದಾನದ ಮಲ್ಲಮ್ಮ ಎಂದು ಕರೆದರು.

ಮನೆಯವರೆಲ್ಲರ ಅತಿಯಾದ ಮೋಹದಿಂದ ಕೆಟ್ಟು ಹೋಗಿದ್ದ ಮೈದುನ ವೇಮನ ಮಹಾಕವಿಯಾಗಿ ರೆಡ್ಡಿ ಕುಲದ ಉದ್ಧಾರಕನಾಗಿ ಬದಲಾಗಿದ್ದು ಮಲ್ಲಮ್ಮನಿಂದಲೇ. ಹಲವಾರು ದುಶ್ಚಟಗಳನ್ನು ಕಲಿತ ಮೈದುನ ವೇಶ್ಯೆಯ ಸಹವಾಸವನ್ನು ಕೂಡ ಮಾಡಿದ್ದ. ಒಂದೊಮ್ಮೆ ದೇವಸ್ಥಾನದಲ್ಲಿ ಮಲ್ಲಮ್ಮನ ಮೂಗುತಿಯನ್ನು ಕಂಡು ಅದಕ್ಕೆ ಆಸೆ ಪಟ್ಟ ಆ ವೇಶ್ಯಾ ಸ್ತ್ರಿಯ ಅಪೇಕ್ಷೆಯಂತೆ ವೇಮನ ಮಲ್ಲಮ್ಮನ ಬಳಿ ಆ ಮೂಗುತಿಯನ್ನು ಕೇಳಿದ. ಮಲ್ಲಮ್ಮ ಇದು ನನ್ನ ತವರು ಮನೆಯಿಂದ ಬಂದ ಉಡುಗೊರೆ ಆದರೂ ನಿನಗೆ ಒಂದು ಷರತ್ತಿನ ಮೇಲೆ ಇದನ್ನು ಕೊಡುತ್ತೇನೆ ಎಂದು ಹೇಳಿ, ಆ ಮೂಗುತಿಯನ್ನು ನೆಲದ ಮೇಲೆ ಇಟ್ಟು ಸಂಪೂರ್ಣ ನಿರ್ವಾಣ ಸ್ಥಿತಿಯಲ್ಲಿ ಹಿಂದೆ ಬಾಗಿ ಆ ವೇಶ್ಯ ಸ್ತ್ರೀಯು ಮೂಗುತಿಯನ್ನು ತೆಗೆದುಕೊಳ್ಳಬೇಕು ಮತ್ತು ಆ ದೃಶ್ಯವನ್ನೇ ವೇಮನ ತದೇಕಚಿತನಾಗಿ ನೋಡಲೇಬೇಕು ಎಂಬುದು ಆಕೆಯ ಷರತ್ತು.

ಇದಕ್ಕೊಪ್ಪಿದ ವೇಮನ ಮೂಗುತಿಯನ್ನು ಅತ್ತಿಗೆಯಿಂದ ಪಡೆದು ವೇಶ್ಯಾ ಬಳಿ ಸಾರಿ ಅತ್ತಿಗೆಯ ಷರತ್ತನ್ನು ಹೇಳಿದ. ಅದನ್ನು ಕೇಳಿದ ಆಕೆ ತಕ್ಷಣವೇ ಶರತ್ತಿಗೆ ಒಪ್ಪಿ ನಿರ್ವಾಣ ಸ್ಥಿತಿಯಲ್ಲಿ ಮೂಗುತಿಯನ್ನು ಪಡೆದಳು. ಆಕೆಯನ್ನು ನಿರ್ವಾಣ ಸ್ಥಿತಿಯಲ್ಲಿ ನೋಡಿದ ವೇಮನ ಭಯಂಕರ ಕ್ಷೋಭೆ ವಿಕಾರಗಳಿಗೊಳಗಾಗಿ ಮಾನವನ ದೇಹ ಎಂದರೆ ಇಷ್ಟೇಯೇ ಎಂದು ಜಿಗುಪ್ಸೆಗೊಂಡು ಅಲ್ಲಿಂದ ಓಡಿ ಹೋದನು. ಜ್ಞಾನೋದಯವಾದ ನಂತರ ವೇಮನ ಅತ್ತಿಗೆಯ ಪಾದಕ್ಕೆ ಬಿದ್ದು ಕ್ಷಮೆ ಕೇಳಿ ಮುಂದೆ ಮನೆ ಬಿಟ್ಟು ಹೋಗಿ ಸಮಾಜವನ್ನು ಸುಧಾರಿಸುವ ನಿಟ್ಟಿನಲ್ಲಿ ಮಹಾಕವಿಯಾದ, ಸಮಾಜೋದ್ಧಾರಕನಾದ.

ಹೀಗೆ ಎಲ್ಲ ರೀತಿಯ ಕಠಿಣ ಪರೀಕ್ಷೆಗಳನ್ನು ಕಂಡ ಹೇಮರೆಡ್ಡಿ ಮಲ್ಲಮ್ಮನ ಕುರಿತು ಸಂಬಂಧಿಗಳು ಹೊರಿಸಿದ ಸಲ್ಲದ ಆರೋಪಗಳನ್ನು ಮಿಥ್ಯವೆಂದು ಸಾರಲು ಆ ಭಗವಾನ್ ಶಂಕರನೇ ಪತ್ನಿ ಸಮೇತನಾಗಿ ಬರಬೇಕಾಯಿತು. ಆಗ ಕುಟುಂಬ ಆದಿಯಾಗಿ ಹೇಮರೆಡ್ಡಿ ಮಲ್ಲಮ್ಮನನ್ನು ಊರವರೆಲ್ಲ ತಪ್ಪಿತಸ್ಥಳಲ್ಲವೆಂದು ಒಪ್ಪಿಕೊಂಡರು. ಮಲ್ಲಮ್ಮನ ಭಕ್ತಿಗೆ ಮೆಚ್ಚಿದ ಪರಶಿವನು ಆಕೆಗೆ ವರವನ್ನು ಕೇಳಲು ಹೇಳಿದಾಗ ಸಮಸ್ತ ರೆಡ್ಡಿ ಕುಲ ಎಂದೂ ಆರ್ಥಿಕ ತೊಂದರೆಯಿಂದ ಬಳಲಬಾರದು ಎಂಬ ದೃಷ್ಟಿಯಿಂದ ಮಲ್ಲಮ್ಮ ರೆಡ್ಡಿ ಕುಲದ ಜನರಿಗೆ ಬಂಗಾರದ ಕಡ್ಡಿ ಹೊಂದಿರುವಷ್ಟಾದರೂ ಶ್ರೀಮಂತಿಕೆ ಇರಲೇಬೇಕು ಎಂದು ಬೇಡಿಕೊಂಡಳು. ಆಕೆಯ ಬೇಡಿಕೆಯ ಫಲವಾಗಿ ಇಂದಿಗೂ ಸಮಸ್ತ ರೆಡ್ಡಿ ಕುಲವನ್ನು ರೆಡ್ಡಿ ಬಂಗಾರದ ಕಡ್ಡಿ ಎಂದೇ ಕರೆಯುತ್ತಾರೆ.

ಹೇಮರೆಡ್ಡಿ ಮಲ್ಲಮ್ಮ ಶತಶತಮಾನಗಳಿಂದ ರೆಡ್ಡಿ ಕುಲದೇವಿಯಾಗಿ ಎಲ್ಲರಿಂದಲೂ ಪೂಜಿಸಲ್ಪಡುತ್ತಾ ಅಜರಾಮರಳಾಗಿದ್ದಾಳೆ. ಪ್ರತಿ ವರ್ಷ ಮೇ ಹತ್ತರಂದು ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಜರುಗುತ್ತದೆ. ಮಲ್ಲಮ್ಮನು ಓಡಾಡಿದ ಶ್ರೀಶೈಲ ಪ್ರಾಂತ್ಯದಲ್ಲಿ ಅತಿ ದೊಡ್ಡ ಹೇಮರೆಡ್ಡಿ ಮಲ್ಲಮ್ಮನ ದೇವಸ್ಥಾನವನ್ನು, ಆಕೆ ವಾಸಿಸಿದ್ದಳೆನ್ನಲ್ಲಾದ ಸ್ಥಳದ ಬಳಿಯಲ್ಲಿಯೇ ರೆಡ್ಡಿ ಕುಲಬಾಂಧವರು ನಿರ್ಮಿಸಿದ್ದಾರೆ, ಮಲ್ಲಮ್ಮ ಬಳಸುತ್ತಿದ್ದ ವನಕೆ ಹೊರಳು ಕಲ್ಲು ಬೀಸುವ ಕಲ್ಲು ಪೂಜಿಸುತ್ತಿದ್ದ ಶಿವಲಿಂಗದ ವಿಗ್ರಹಗಳು ಅಲ್ಲಿ ಇದ್ದು ಹೇಮರೆಡ್ಡಿ ಮಲ್ಲಮ್ಮನಿಗೆ ಉಡಿ ತುಂಬುವ ಮೂಲಕ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ ಎಂಬ ಪ್ರತೀತಿ ಇದೆ. ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ನಡೆಯುವ ಲಕ್ಷ ದೀಪೋತ್ಸವ ನೋಡಲು ಎರಡು ಕಣ್ಣುಗಳು ಸಾಲದು. ಬನ್ನಿ ನಾವು ಕೂಡ ಸ್ತ್ರೀ ಕುಲದ ಹೆಮ್ಮೆಯ ಕಳಶ ಮಲ್ಲಮ್ಮ ತಾಯಿಯನ್ನು ಪೂಜಿಸಿ ಆಕೆಯ ಕೃಪಾಶೀರ್ವಾದಕ್ಕೆ ಪಾತ್ರರಾಗೋಣ.